ಅನುಕೂಲ ಮಾಡಿಕೊಟ್ಟಿತು. ಭಾರೀ ವಾಹನಗಳಿಗೆ ಮೂರು ಬಾರ್ಜಗಳನ್ನು ಮಾಡಲಾಯಿತು. ಈಗ ಡಿಸೆಂಬರ್ 1995ನೇ ಇಸವಿಯಲ್ಲಿ ಈ ಸೇತುವೆ ಮರಷ್ಠಿ ಕೆಲಸ ಪ್ರಾರಂಭವಾಗಿ ಐದು ಬಾರ್ಜಗಳನ್ನು ವಾಹನಗಳ ಸಂಚಾರಕ್ಕೆ ಇರಬೇಕು, ಹಾಗೂ ಲಘು ವಾಹನಗಳನ್ನು ಈ ಸೇತುವೆಯ ಮೇಲೆ ಬಿಡಬೇಕೆಂದು ಒಪ್ಪಿಕೊಂಡು, ಆ ನಿಯಮದ ಮೇಲೆ ಅದು ಕಾರ್ಯಾಚರಣೆಗೆ ಬಂತು. ಆದರೆ ಈ ಮೂರು ನಾಲ್ಕು ತಿಂಗಳುಗಳಿಂದ ಅಲ್ಲಿ ಆರು ಬಾರ್ಜಗಳಲ್ಲಿ ಕೇವಲ ಎರಡು ಬಾರ್ಜಗಳು ಮಾತ್ರ ಕೆಲಸ ಮಾಡುತ್ತಿವೆ. ಹಾಗಾಗಿ ವಾಹನಗಳ ದಟ್ಟಣೆ ಜಾಸ್ತಿಯಾಗಿ ಎರಡು ಮೂರು ಕಿ.ಮೀ. ವಾಹನಗಳ ಉದ್ದದ ಸಾಲುಗಳು ನಿಲ್ಲುತ್ತವೆ. ಇಂದರಿಂದಾಗಿ ವಾಹನಗಳ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಅಲ್ಲದೆ ಅಲ್ಲಿರುವಂತಹ ಇಕ್ಕಟ್ಟಿನ ದಾರಿಯಲ್ಲಿ ಸಾರ್ವಜನಿಕರಿಗೂ ಕೂಡ ತೊಂದರೆಯಾಗುತ್ತಿದೆ. ಈಗ ಇರತಕ್ಕಂಥ ಎರಡು ಉಪಾಯಗಳೆಂದರೆ ಒಂದು ಬಾರ್ಜನ್ನು ಹೆಚ್ಚಿಗೆ ಒದಗಿಸಬೇಕು? ಇಲ್ಲದಿದ್ದರೆ, ಸೇತುವೆಯ ಮೇಲೆ ಕನಿಷ್ಟ 10 ಟನ್ ಭಾರದ ವಾಹನಗಳು ಹೋಗುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಈ ವಿಷಯವನ್ನು ನಾವು ಚರ್ಚೆ ಮಾಡಿದಾಗ, ನ್ಯಾಷನಲ್ ಹೈವೇಯ ಮುಖ್ಯ ಅಭಯಂತರರು ಹಾಗೂ ಬ್ರಿಡ್ಜ್‌ನ ಕಂಟ್ರಾಕ್ಟದಾರರು ನನ್ನನ್ನು ಕರೆಯಿಸಿಕೊಂಡು ಸಮಾಲೋಚನೆ ಮಾಡಿ 10 ಟನ್ ಭಾರದ ವಾಹನಗಳನ್ನು ಬಿಡುತ್ತೇವೆ. ಅದಕ್ಕೆ ಬ್ರಿಡ್ಜ ಸಫಲವಾಗಿದೆ ಎಂದು ಒಂದು ನಿರ್ಣಯಕ್ಕೆ ಬಂದೆವು. ಆದರೆ ಎರಡು ತಿಂಗಳುಗಳಾದರೂ ನಿರ್ಣಯವಾದಂತೆ ಅನುಷ್ಠಾನಗೊಳಿಸುತ್ತಿಲ್ಲ. ಹಾಗಾಗಿ ಅಲ್ಲಿಯ ಜನರು ತೊಂದರೆಗೆ ಈಡಾಗಿದ್ದಾರೆ. ಅವರು ಚಳುವಳಿಯನ್ನು ಮಾಡುವಂತಹ ಸನ್ನಿವೇಶ ಇದೆ, ಇಲ್ಲಿ ಚಳುವಳಿಯಾಗಿ ಸಾರ್ವಜನಿಕರ ಆಸ್ತಿಪಾಸ್ತಿಗೆ ನಷ್ಟವಾದ ಮೇಲೆ ಸರ್ಕಾರ ಎಚ್ಚೆತ್ತುಕೊಳ್ಳುತ್ತದೆನ್ನುವ ಒಂದು ಪ್ರತೀತಿ ಇದೆ. ಆ ಪ್ರತೀತಿಗೆ ಎಡೆ ಮಾಡಿಕೊಡದೆ, ಕೂಡಲೇ 10 ಟನ್ ಭಾರದ ವಾಹನಗಳನ್ನು ಆ ಸೇತುವೆಯ ಮೇಲೆ ಬಿಡುವುದಕ್ಕೆ ಅವಕಾಶ ಮಾಡಿಕೊಡಬೇಕು, ಇಲ್ಲದಿದ್ದರೆ ಐದು ಬಾರ್ಜಗಳು ಸತತವಾಗಿ ಕೆಲಸ ಮಾಡುವುದಕ್ಕೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಮೊದಲೇ ವಿಷಯ ಹೇಳಿದ್ದರೆ, ಅದನ್ನು ಪೂರ್ತಿ ತಿಳಿದುಕೊಂಡು ಉತ್ತರ ಹೇಳುತ್ತಿದ್ದೆವು.

ಅಧ್ಯಕ್ಷರು : ಇವತ್ತು ಬೆಳಿಗ್ಗೆ ಸದನಕ್ಕೆ ಹೊರಡುವಾಗ ಐದು ನಿಮಿಷ ಇರುವಾಗಲೇ ಹೇಳಿದ್ದುದು. ಸಂಬಂಧಪಟ್ಟ ಮಂತ್ರಿಗಳು ನನ್ನ ಅನುಮತಿ ಪಡೆದುಕೊಂಡು ಬೇರೆ ಕಡೆಗೆ ಹೋಗಿದ್ದಾರೆ. ನೀವು ಯಾವುದು ಎಂದು ಮೆನಷನ್‌ಮಾಡಿದರೆ, ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ನಾಳೆ ಉತ್ತರ ಕೊಡುತ್ತಾರೆ.

(ಏ) ದಕ್ಷಿಣ ಕನ್ನಡ ಜಿಲ್ಲೆಯ ಜಾನಪದ ಕ್ರೀಡೆಗಳಲ್ಲಿ ಒಂದಾದ ಕಂಬಳ ಕ್ರೀಡೆ ಕುರಿತು

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ್) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ವೈಶಿಷ್ಟ್ಯಗಳಲ್ಲಿ ಒಂದಾದ ಜಾನಪದ ಕ್ರೀಡೆ, ಕಂಬಳ 1,200 ವರ್ಷಗಳಷ್ಟು ಹಿರಿತನ ಹೊಂದಿದೆ. ಹಲವು ಅರಸರ ಕಾಲದಿಂದಲೂ ಕೂಡ ರಾಜ ಮರ್ಯಾದೆಯನ್ನು ಹೊಂದಿಕೊಂಡು ಬಂದಂಥ ಈ

ಸಾಂಸ್ಕೃತಿಕ ಕ್ರೀಡೆ ಈಗ ತನ್ನ ಮೆರಗನ್ನು ಕಳೆದುಕೊಂಡಿದೆ, ಸೊರಗಿಕೊಂಡಿದೆ. ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಕಾಸರಗೊಡು ಮತ್ತು ಚಿಕ್ಕಮಗಳೂರುಗಳಲ್ಲಿ ಈ ಜಾನಪದ ಕ್ರೀಡೆ ಬಹಳಷ್ಟು ಪ್ರಖ್ಯಾತಿಯನ್ನು ಪಡೆದುಕೊಂಡಿದೆ. ಈಗಿನ ಕಾಲದಲ್ಲಿ ಒಂದು ಕೋಣವನ್ನು ಸಾಕಬೇಕಾದರೆ ಒಂದು ದಿವಸಕ್ಕೆ 250 ರೂಪಾಯಿ ಬೇಕಾಗುತ್ತದೆ. ಮಾನ್ಯ ಮಂತ್ರಿಗಳು ನೋಡುತ್ತಾ ಇದ್ದಾರೆ, ಹೇಳಿಕೆ ಕೊಡುತ್ತಿದ್ದಾರೆ. ಆದರೆ ಜನ ನಂಬುತ್ತಾ ಇಲ್ಲ. ಮೊನ್ನೆ ಇವರು 'ಪಜರಿಗೆ' ಹೋಗಿದ್ದರು. ಇವರ ಎದುರು ಜನ ಹೇಳಿದರು, ನೀವು ಒಂದು ಆಶ್ವಾಸನೆ ಕೊಡುತ್ತಿರಿ ಅದನ್ನು ನೆಡಸುತ್ತಿಲ್ಲ ಎಂದು.ನಾನು ತಮ್ಮ ಹತ್ತಿರ ವಿನಂತಿ ಮಾಡುತ್ತಿದ್ದೇನೆ, ಈ ಕಂಬಳ ಸಂಘಟಕರಿಗೆ ಪ್ರೋತ್ಸಾಹ ಕೊಡುತ್ತೀರಾ, ಆ ಕೋಣಗಳ ಹಿಂದೆ ಓಡುವ ಓಟಗಾರರಿಗೆ ಗೌರವ ಧನ ಪ್ರಶಸ್ತಿಯನ್ನು ಸರ್ಕಾರ ಕೊಡಬೇಕು. ನಶಿಸುತ್ತಿರುವ ಸಾಂಸ್ಕೃತಿಕ ಜಾನಪದ ಕ್ರೀಡೆಯನ್ನು ರಕ್ಷಿಸಬೇಕು. ಈ ಸದನದಲ್ಲಿ ಬಹಳಷ್ಟು ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯ ಈ ಕ್ರೀಡೆಯ ಬಗ್ಗೆ ಈ ಬೇಡಿಕೆ ಬರುತ್ತಾಲುಂಟು. ಸುಮಾರು 10 ವರ್ಷಗಳಿಂದ ಬೇಡಿಕೆ ಬರುತ್ತಾ ಇದೆ. ನನಗೆ ದಯವಿಟ್ಟು ಗುಣಾತ್ಮಕವಾದ ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಅಧ್ಯಕ್ಷರು : ಇದಕ್ಕೆ ಚರ್ಚೆ ಬೇಡ, ಕ್ರೀಡಾ ಸಚಿವರು ಇಲ್ಲ, ಇದಕ್ಕೆ ಕ್ರೀಡಾ ಸಚಿವರು ಉತ್ತರ ಕೊಟ್ಟರೆ ಸಾಕೆ.

ಶ್ರೀ ಬಿ.ಎ. ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು) : ಇದರ ಬಗ್ಗೆ ನಾನು ಬಹಿರಂಗವಾಗಿ ಹೇಳಿದ್ದೇನೆ. ಇದು ಗ್ರಾಮಾಂತರವಾಗಿರತಕ್ಕಂಥ ಕ್ರೀಡೆ, ಇದಕ್ಕೆ ನಾವು ವಿದೇಶಗಳಿಂದ ಜನಗಳನ್ನು ಆಕರ್ಷಿಸಲು ಏನೆಲ್ಲ ಮಾಡಬೇಕು ಎನ್ನುವುದರ ಬಗ್ಗೆ ನಾವೆಲ್ಲ ಕುಳಿತುಕೊಂಡು ಚರ್ಚೆ ಮಾಡಿ ಅದನ್ನು ಸರ್ಕಾರದ ಮುಂದೆ ತರುತ್ತೇವೆ. ಇದಕ್ಕೆ ಏನಾದರೂ ನಾವು ಪ್ರೋತ್ಸಾಹ ಕೊಡುತ್ತೇವೆಂದು ಹೇಳಿದ್ದೇನೆ. ಇಂದು ಕೂಡ ಹೇಳುತ್ತೇನೆ.

ಶ್ರೀ ಕೆ. ಜಯರಾಮ ಶೆಟ್ಟಿ : ಅಲ್ಲಿನ ಜನ ರಸ್ತೆಬೇಕು ಎಂದು ಕೇಳುತ್ತಿದ್ದಾರೆ ಅದಕ್ಕೆ ಸರ್ಕಾರ ದಯವಿಟ್ಟು ಮಾಡಿಕೊಡಬೇಕು.

ಶ್ರೀ ಬಿ.ಎ. ಮೊಹಿದ್ದೀನ : ನಿಮ್ಮ ಅನುದಾನದಲ್ಲಿ ಕೊಡಿ, ಅದು ನಿಮಗೇ ಇದೆಯಲ್ಲ.

ಶ್ರೀ ಕೆ. ಜಯರಾಮ ಶೆಟ್ಟಿ : ನಮ್ಮ ಅನುದಾನದಲ್ಲಿ ಮಾಡಲು ಎಷ್ಟು ಕೊಡುತ್ತೀರಿ? 20 ಲಕ್ಷ ಕೊಟ್ಟರೆ ಆಗುತ್ತದೆಯೇ? 20 ಲಕ್ಷ ಕೊಟ್ಟರೆ ಒಂದು ವರ್ಷದಲ್ಲಿ ರಸ್ತೆ ಮಾಡುವುದು.

ಅಧ್ಯಕ್ಷರು : ಇದಕ್ಕೆ ಜಾಸ್ತಿ ಬೇಕು, ಅದಕ್ಕೆ ಮಂತ್ರಿಗಳನ್ನು ಕರೆಯಿಸಿ ಹೇಳಿ.

(ಐ) ಗುಟಗಿ ಮಾರಾಟ ನಿಷೇಧದ ಬಗ್ಗೆ

ಶ್ರೀ ಎನ್. ಯೋಗೀಶ್ ಭಟ್ಟ (ಮಂಗಳೂರು) : ಸನ್ಮಾನ್ಯ ಅಧ್ಯಕ್ಷರೆ, ಗುಟುಕಾ ಮಾರಾಟ ನಿಷೇಧದ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಸನ್ಮಾನ್ಯ ಆರೋಗ್ಯ ಸಚಿವರು,